# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ, ರಾಜರಾಜೇಶ್ವರಿ ನಗರ ಉಪ ವಿಭಾಗದ ವಾರ್ಡ್– ಸಂಖ್ಯೆ 160ರಲ್ಲಿ ದಿನಾಂಕ:07.08.2021 ರಂದು, ನಡೆದ ವಾರ್ಡ್ DETER ಸಮಿತಿ ಸಭೆಯ ಸಭಾ ನಡವಳಿಗಳು

ದಿನಾಂಕ: 07.08.2021 ರಂದು ವಾರ್ಡ್ ಸಂಖ್ಯೆ 160ರ ಆಗಸ್ಟ್ ಮಾಹೆಯ ಮೊದಲನೇ ವಾರ್ಡ್ DETER ಸಮಿತಿ ಸಭೆ ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರುಗಳು ಹಾಗೂ ಅಧಿಕಾರಿಗಳು ಭಾಗವಹಿಸಿದ್ದರು. ಕೋವಿಡ್ 2ನೇ ಅಲೆಯ ನಂತರ ವಾರ್ಡ್ ಸಂಖ್ಯೆ–160ರ ನೋಡಲ್ ಅಧಿಕಾರಿಗಳಿಗೆ ಇದೇ ಮೊದಲ ಭೌತಿಕ ಸಭೆಯಾದ್ದರಿಂದ (Offline) ನೋಡಲ್ ಅಧಿಕಾರಿಗಳು ತಮ್ಮ ಕಿರು ಪರಿಚಯ ಮಾಡಿಕೊಂಡು ಸಭೆಗೆ ಹಾಜರಿದ್ದ ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ಸ್ವಾಗತ ಕೋರಿದರು.

### ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

- ಶ್ರೀ ಚಂದ್ರಶೇಖರ್, ಇಂಡಿಯನ್ ಬ್ಯಾಂಕ್ ಕಾಲೋನಿ ನಿವಾಸಿ ಇವರು ಐಡಿಯಲ್ ಹೋಮ್ಸ್ ಬಡಾವಣೆಯಲ್ಲಿ ಶೇ.40 ರಷ್ಟು ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಂಡಿದ್ದು ಉಳಿದ ರಸ್ತೆಗಳನ್ನು ಯಾವಾಗ ಅಭಿವೃದ್ಧಿಪಡಿಸಲಾಗುವುದೆಂದು ಪ್ರಶ್ನಿಸಿದರು ಇದಕ್ಕೆ ಉತ್ತರಿಸಿದ ವಾರ್ಡ್ ಅಭಿಯಂತರರು ಸದರಿ ಪ್ರದೇಶದಲ್ಲಿ ಈಗಾಗಲೇ ಶೇ.75ರಷ್ಟು ಅಭಿವೃದ್ಧಿ ಕಾಮಗಾರಿ ಮುಗಿದಿದ್ದು, ಉಳಿದ ರಸ್ತೆಗಳನ್ನು ಮುಂಬರುವ ಅನುದಾನದಲ್ಲಿ ಅಭಿವೃದ್ಧಿಪಡಿಸಲು ಕ್ರಮ ವಹಿಸಲಾಗುವುದೆಂದು ತಿಳಿಸಿದರು.
- ಶ್ರೀ ಪ್ರಶಾಂತ್, ಐಡಿಯಲ್ ಹೋಮ್ಸ್ ಬಡಾವಣೆ ನಿವಾಸಿ, ವಾರ್ಡ್ ವ್ಯಾಪ್ತಿಯಲ್ಲಿ ಬೆಸ್ಕಾಂ ಹಾಗೂ ಬಿ.ಡಬ್ಲ್ಯೂ.ಎಸ್ ಎಸ್.ಬಿ ವತಿಯಿಂದ ಭೂಗತ ಕೇಬಲ್ ಅಳವಡಿಸಲು ಹಾಗೂ ಒಳ ಚರಂಡಿ ಅಭಿವೃದ್ಧಿಪಡಿಸಲು ರಸ್ತೆ ಅಗೆದ ನಂತರ ಸರಿಯಾದ ಸಮಯಕ್ಕೆ ಮರುಪೂರಣಗೊಳಿಸದೇ (Restoration) ಇರುವುದರಿಂದ ವಾಹನ ಸವಾರರು ಹಾಗೂ ಸಾರ್ವಜನಿಕರು ಬೀಳುವ ಸಂಭವವಿದ್ದು ತುರ್ತಾಗಿ ಸರಿಪಡಿಸುವಂತೆ ಕೋರಿದರು. ಬಿ.ಡಬ್ಲ್ಯೂ.ಎಸ್.ಎಸ್.ಬಿ. ವಿಭಾಗದ ಅಧಿಕಾರಿಗಳು ಸಭೆಗೆ ಹಾಜರಾಗದೇ ಇರುವುದ್ದಕೆ ನೋಡಲ್ ಅಧಿಕಾರಿಗಳು ಬೇಸರ ವ್ಯಕ್ತಪಡಿಸಿ ಮುಂದಿನ ಸಭೆಗೆ ಹಾಜರಾದಿದ್ದಲ್ಲಿ ಶಿಸ್ತು ಕ್ರಮ ಜರುಗಿಸಲು ಮೇಲಧಿಕಾರಿಗಳಿಗೆ ಪತ್ರ ಬರೆಯಲು ಕಾರ್ಯದರ್ಶಿಗಳಿಗೆ ಸೂಚಿಸಿದರು.
- ಶ್ರೀಮತಿ ವಾಣಿ, 3ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಐಡಿಯಲ್ ಹೋಮ್ಸ್ ಬಡಾವಣೆ ನಿವಾಸಿ ಈ ಕೆಳಕಂಡ ದೂರು ಸಲ್ಲಿಸಿದರು.
  - ತಮ್ಮ ಪ್ರದೇಶದ ಖಾಲಿ ನಿವೇಶನದಲ್ಲಿ ಕಸ ಸುರಿಯುತ್ತಿದ್ದು, ಸೂಕ್ತ ಕ್ರಮವಹಿಸುವಂತೆ ಕಿರಿಯ ಆರೋಗ್ಯ ಪರಿವೀಕ್ಷಕರಲ್ಲಿ ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ಕಿರಿಯ ಆರೋಗ್ಯ ಪರಿವೀಕ್ಷಕರು ಈ ಬಗ್ಗೆ ಪರಿಶೀಲಿಸಿ ಮಾರ್ಷಲ್ ಗಳ ಮೂಲಕ ದಂಡ ವಿಧಿಸಲು ಕ್ರಮ ವಹಿಸಲಾಗುವುದೆಂದು ತಿಳಿಸದರು.
  - ರಸ್ತೆ ಬದಿ ಗುಡಿಸಲು (Street sweeping) ಪೌರ ಕಾರ್ಮಿಕರು ಬರುತ್ತಿಲ್ಲವೆಂದು ದೂರು ನೀಡಿದರು ಇದಕ್ಕೆ ಪ್ರತಿಕ್ರಿಯಿಸಿದ ಕಿರಿಯ ಆರೋಗ್ಯ ಪರಿವೀಕ್ಷಕರು ಪೌರ ಕಾರ್ಮಿಕರ ಕೊರತೆಯಿದ್ದು ಈ ಬಗ್ಗೆ ಹೆಚ್ಚುವರಿ ಪೌರ

ಕಾರ್ಮಿಕರನ್ನು ಒದಗಿಸುವಂತೆ ಕೇಂದ್ರ ಕಛೇರಿಗೆ ಅನುಮೋದನೆ ಸಲ್ಲಿಸಿದ್ದು, ಅನುಮೋದನೆಗೊಂಡು ಹೆಚ್ಚಿನ ಪೌರ ಕಾರ್ಮಿಕರನ್ನು ನಿಯೋಜಿಸುವವರೆಗೆ ಲಭ್ಯವಿರುವ ಪೌರ ಕಾರ್ಮಿಕರಿಂದಲೇ ಆದ್ಯತೆಯ ಮೇರೆಗೆ ರಸ್ತೆ ಬದಿ ಗುಡಿಸಲಾಗುವುದೆಂದು ತಿಳಿಸಿದರು.

- 1522 ಹೋಟೆಲ್ ಎದುರು, 15ನೇ ಅಡ್ಡರಸ್ತೆ, ಐಡಿಯಲ್ ಹೋಮ್ಸ್ ಬಡಾವಣೆ ಇಲ್ಲಿ ಚರಂಡಿಗೆ ಕಸ ಸುರಿಯುತ್ತಿರುವುದರಿಂದ ಚರಂಡಿ ಬ್ಲಾಕ್ ಆಗಿದ್ದು ಸ್ವಚ್ಛಗೊಳಿಸಿಕೊಡುವಂತೆ ಕಿರಿಯ ಆರೋಗ್ಯ ಪರಿವೀಕ್ಷಕರಲ್ಲಿ ಕೋರಿದರು.

➢ ಶ್ರೀ ಮಹೇಶ್, ಬಿಇಎಂಎಲ್ 3ನೇ ಹಂತದ ನಿವಾಸಿ ಇವರು Pai Electronics ಎದುರು, 5ನೇ ಮುಖ್ಯರಸ್ತೆ, ಕಾಫಿ ಕಟ್ಟೆ ಎದುರು ರಸ್ತೆ ಇಲ್ಲಿ ರಸ್ತೆ ಬದಿ ಚರಂಡಿಯಲ್ಲಿ Themocoal ತ್ಯಾಜ್ಯ ಸುರಿದಿರುವುದರಿಂದ ಚರಂಡಿ ಬ್ಲಾಕ್ ಆಗಿದ್ದು ಸ್ವಚ್ಛಗೊಳಿಸಿಕೊಡುವಂತೆ ಕೋರಿದರು.

➢ ಶ್ರೀ ಚಂದ್ರಶೇಖರ್ ಐಡಿಯಲ್ ಹೋಮ್ ಬಡಾವಣೆ ನಿವಾಸಿ, ಇವರು ಪೌರ ಕಾರ್ಮಿಕರಿಗೆ ಕಾಲಹರಣ ಮಾಡದೇ ಸರಿಯಾಗಿ ಕಾರ್ಯ ನಿರ್ವಹಿಸಲು ಸೂಕ್ತ ನಿರ್ದೇಶನ ನೀಡುವಂತೆ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಕೋರಿದರು. ಕೆಲಸ ಮಾಡದೇ ಕಾಲಹರಣ ಮಾಡುವ ಪೌರ ಕಾರ್ಮಿಕರಿಗೆ ಮೇಲಧಿಕಾರಿಗಳಿಂದ ನೋಟೀಸ್ ನೀಡಲು ಕ್ರಮ ವಹಿಸುವಂತೆ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.

➢ ಶ್ರೀ ಸುರೇಶ ರಾವ್, ಕೆಂಚೇನಹಳ್ಳಿ ನಿವಾಸಿ ಇವರು ಈ ಕೆಳಕಂಡ ದೂರು ಸಲ್ಲಿಸಿದರು.

- ಕೆಂಚೇನಹಳ್ಳಿ ಗ್ರಾಮದ ರಸ್ತೆ ಮತ್ತು ಚರಂಡಿ ಅಭಿವೃದ್ಧಿಪಡಿಸಲು ಕೋರಿದರು. ಇದಕ್ಕೆ ಉತ್ತರಿಸಿದ ವಾರ್ಡ್ ಅಭಿಯಂತರರು ಸದರಿ ಕಾಮಗಾರಿಯ ಮರು ಟೆಂಡರ್ ಕರೆದು ಕಾರ್ಯಾದೇಶ ದೊರೆತ ನಂತರ ಅಭಿವೃದ್ಧಿಪಡಿಸಲಾಗುವುದೆಂದು ತಿಳಿಸಿದರು.
- ಕೆಂಚೇನಹಳ್ಳಿ ಪ್ರದೇಶದಲ್ಲಿ ಇರುವ 3 ಬೋರ್ವೆಲ್ ಗಳಲ್ಲಿ ಕೇವಲ ಒಂದು ಬೋರ್ವೆಲ್ ಮಾತ್ರ ಸರಿ ಇದ್ದು ಈಗ ಆ ಬೋರ್‌ವೆಲ್ ಕೂಡ ಕೆಟ್ಟು ಹೋಗಿ ನೀರಿನ ಸಮಸ್ಯೆ ತಲೆದೋರಿದ್ದು ತುರ್ತಾಗಿ ಸರಿಪಡಿಸುವಂತೆ ಕೋರಿದರು. ಇದಕ್ಕೆ ಉತ್ತರಿಸಿದ ನೋಡಲ್ ಅಧಿಕಾರಿಗಳು ಬಿ,ಡಬ್ಲ್ಯೂ.ಎಸ್.ಎಸ್.ಬಿ ವಿಭಾಗದ ಅಧಿಕಾರಿಗಳ ಗಮನಕ್ಕೆ ತಂದು ಸಮಸ್ಯೆ ಪರಿಹರಿಸಲು ಕಾರ್ಯದರ್ಶಿಗಳಿಗೆ ಸೂಚಿಸಿದರು.
- ತಮ್ಮ ಪ್ರದೇಶದಲ್ಲಿ ಸೊಳ್ಳೆ ಔಷಧ ಸಿಂಪಡಿಸಲು ಕೋರಿದರು, ಇದಕ್ಕೆ ಉತ್ತರಿಸಿದ ಹಿರಿಯ ಆರೋಗ್ಯ ಪರಿವೀಕ್ಷಕರು ಸೊಳ್ಳೆ ಔಷಧ ಸಿಂಪಡಿಸಲು ಕ್ರಮ ವಹಿಸುವುದಾಗಿ ತಿಳಿಸಿದರು.

➢ ಶ್ರೀಮತಿ ವಿಜಯ, ಐಡಿಯಲ್ ಹೋಮ್ ನಿವಾಸಿ ಇವರು ತಮ್ಮ ಪ್ರದೇಶದಲ್ಲಿ ಸೊಳ್ಳೆ ಔಷಧ ಸಿಂಪಡಿಸಲು ಕೋರಿದರು.

➢ ಶ್ರೀ ಗುರುರಾಜ್ ರಾವ್ ಇವರು ರಂಗಮಂದಿರ ಎದುರು ರಸ್ತೆಯಲ್ಲಿ ಹಳ್ಳ ಬಿದ್ದಿದ್ದು ಮುಚ್ಚಲು ಕ್ರಮ ವಹಿಸುವಂತೆ ವಾರ್ಡ್ ಅಭಿಯಂತರರಿಗೆ ಕೋರಿದರು.

➢ ಶ್ರೀ ಚಂದ್ರಶೇಖರ್ ಇವರು Golden terrace Apartment ರಸ್ತೆಯಲ್ಲಿ ಒಳ ಚರಂಡಿ ಅಭಿವೃದ್ಧಿಪಡಿಸಲು ರಸ್ತೆ ಅಗೆದ ನಂತರ ಸರಿಯಾದ ಸಮಯಕ್ಕೆ ಮರುಪೂರಣಗೊಳಿಸಿರುವುದಿಲ್ಲವೆಂದು ದೂರು ನೀಡಿ ತುರ್ತಾಗಿ ಸರಿಪಡಿಸುವಂತೆ ಕೋರಿದರು

➢ ಶ್ರೀಮತಿ ಸುಚೇತಾ ಭಟ್ ರವರು LG Godown, Architha Aithal Apartment ಎದುರು ಹಾಗೂ Millenium ಶಾಲೆ ಹತ್ತಿರ ಬ್ಲಾಕ್ ಸ್ಪಾಟ್ ಉಂಟಾಗಿದ್ದು ತೆರವುಗೊಳಿಸುವಂತೆ ಕ್ರಮ ವಹಿಸುವಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಕೋರಿದರು.

- ಶ್ರೀ ಚಂದ್ರಶೇಖರ್ ರವರು ಐಡಿಯಲ್ ಹೋಮ್ಸ್ ಬಡಾವಣೆಯಲ್ಲಿ ರಸ್ತೆ ಬದಿ ನಾಮಫಲಕ (Street Name Board) ಅಳವಡಿಸಲು ಕೋರಿದರು. ಇದಕ್ಕೆ ಉತ್ತರಿಸಿದ ವಾರ್ಡ್ ಅಭಿಯಂತರರು ಮುಂಬರುವ ಅನುದಾನದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದೆಂದು ತಿಳಿಸಿದರು.
- ಜಿಲ್ಲಾ ಶಿಕ್ಷಣ ತರಬೇತಿ ಕೇಂದ್ರದ ಬಳಿ ಕಸ ಸುರಿಯುತ್ತಿದ್ದು ಈ ಬಗ್ಗೆ ಕ್ರಮ ವಹಿಸುವಂತೆ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಕೋರಿದರು. ಹಾಗೂ ಗೋಪಾಲ್ ಆರ್ಕೇಡ್ ಬಳಿ ರಾಜಗಾಲುವೆಗೆ ಅಡ್ಡಲಾಗಿ ನಿರ್ಮಿಸಿರುವ ಸೇತುವೆಯ ಮೇಲೆ ಫುಟುಪಾತ್ ಇಲ್ಲದೇ ಇರುವುದರಿಂದ ಪಾದಾಚಾರಿಗಳು ಓಡಾಡಲು ಸಾಧ್ಯವಾಗುತ್ತಿಲ್ಲವೆಂದು ತಿಳಿಸಿದರು.
- ಹಿರಿಯ ಆರೋಗ್ಯ ಪರಿವೀಕ್ಷಕರು ತಮ್ಮ ಅಧೀನ ಸಿಬ್ಬಂಧಿಗಳು ತಮ್ಮ ಫೋನ್ ಕರೆ ಸ್ವೀಕರಿಸುವುದಿಲ್ಲವೆಂದು ದೂರು ನೀಡಿದರು, ಪ್ರತಿಕ್ರಿಯಿಸಿದ ನೋಡಲ್ ಅಧಿಕಾರಿಗಳು ಮೇಲಧಿಕಾರಿಗಳ ಫೋನ್ ಕರೆ ಸ್ವೀಕರಿಸುವಂತೆ ಕಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ ಮಾರ್ಷಲ್ ಗಳಿಗೆ ತಿಳಿಸಿದರು.
- ಶ್ರೀಮತಿ ವಾಣಿ ರವರು ಐಡಿಯಲ್ ಹೋಮ್ಸ್ ಬಡಾವಣೆಯಲ್ಲಿ ರಸ್ತೆ ಬದಿ ಬಿದ್ದಿರುವ ಮರದ ಎಲೆ ವಿಲೇವಾರಿಗೊಳಿಸಲು ಕ್ರಮ ವಹಿಸುವಂತೆ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಕೋರಿದರು. ಇದಕ್ಕೆ ಉತ್ತರಿಸಿದ ಘನ ತ್ಯಾಜ್ಯ ನಿರ್ವಹಣೆ ಗುತ್ತಿಗೆದಾರರು ಪೌರ ಕಾರ್ಮಿಕರ ಕೊರತೆಯಿರುವುದರಿಂದ ಬೀದಿ ಬದಿ ಮರದ ಎಲೆ ಸಂಗ್ರಹಿಸಲು ಸಾಧ್ಯವಾಗುತ್ತಿಲ್ಲ, ಮರದ ಎಲೆ ಸಂಗ್ರಹಿಸಿ ರಾಶಿ ಹಾಕಿ ಪಾಲಿಕೆಯ ಕಸ ಸಂಗ್ರಹಣೆ ವಾಹನಗಳಿಗೆ ನೀಡಿದಲ್ಲಿ ಸ್ವೀಕರಿಸಲಾಗುವುದೆಂದು ತಿಳಿಸಿದರು.
- ಕೋವಿಡ್ ಲಸಿಕೆ 2ನೇ ಡೋಸ್ ನೀಡಲಾಗುತ್ತಿದೆಯೇ ಎಂದು ಪ್ರಶ್ನಿಸಲಾಗಿ ಉತ್ತರಿಸಿದ ಬಂಗಾರಪ್ಪನಗರ ವೈದ್ಯಾಧಿಕಾರಿಗಳ ಪ್ರತಿನಿಧಿ ಬೆಳಿಗ್ಗೆ 10:30 ರಿಂದ ಸಂಜೆ 4:00 ರವರೆಗೆ ಲಭ್ಯತೆಗನುಗುಣವಾಗಿ 2ನೇ ಡೋಸ್ ನೀಡಲಾಗುತ್ತಿದೆಯೆಂದು ತಿಳಿಸಿದರು.
- ಶ್ರೀಮತಿ ಸುಚೇತಾ ಭಟ್ ರವರು ಫ್ಲೆಕ್ಸ್, ಬ್ಯಾನರ್ ಹಾಕದಂತೆ ಮಾನ್ಯ ಘನ ಸರ್ವೋಚ್ಚ ನ್ಯಾಯಾಲಯದ ಆದೇಶವಿದ್ದರೂ ಜಯಣ್ಣ ಸರ್ಕಲ್ ಬಳಿ ಇರುವ ಮಾನ್ಯ ಶಾಸಕರ ಕಛೇರಿ ಬಳಿ ಬ್ಯಾನರ್ ಹಾಕಿದ್ದಾರೆಂದು ದೂರು ನೀಡಿದರು. ಉತ್ತರಿಸಿದ ವಾರ್ಡ್ ಅಭಿಯಂತರರು ಮೇಲಧಿಕಾರಿಗಳೊಂದಿಗೆ ಚರ್ಚಿಸಿ ಬ್ಯಾನರ್ ತೆರವುಗೊಳಿಸಲಾಗುವುದೆಂದು ತಿಳಿಸಿದರು.
- ಶ್ರೀಮತಿ ವಿಜಯಾ ರವರು ಸಿದ್ದಲಿಂಗಯ್ಯ ಪಾರ್ಕ್ ಬಳಿ ತರಕಾರಿ ಮಾರುವವರು ಕಸವನ್ನು ರಸ್ತೆ ಬದಿಯಲ್ಲಿಯೇ ಸುರಿದು ಹೋಗುತ್ತಿದ್ದು, ಸೂಕ್ತ ಕ್ರಮ ವಹಿಸಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಕೋರಿದರು.
- ಬೆಸ್ಕಾಂ ವತಿಯಿಂದ ಮರಕ್ಕೆ ತಗುಲುವ ಸಂಭವವಿರುವ ಮರದ ರೆಂಬೆಗಳನ್ನು ತೆರವುಗೊಳಿಸಿದ ನಂತರ ಸರಿಯಾಗಿ ವಿಲೇ ವಾರಿ ಮಾಡದೇ ಅಲ್ಲಿಯೇ ಬಿಟ್ಟು ಹೋಗುತ್ತಿರುವುದಾಗಿ ಹಿಂದಿನ ಸಭೆಯಲ್ಲಿ ದೂರು ನೀಡಿದ್ದರೂ ಅಲ್ಲಿಯೇ ಬಿಟ್ಟು ಹೋಗುತ್ತಿರುವುದಾಗಿ ಮತ್ತೊಮ್ಮೆ ಸಾರ್ವಜನಿಕರು ದೂರು ನೀಡಿದರು ಇದಕ್ಕೆ ಉತ್ತರಿಸಿದ ಕಿರಿಯ ಅಭಿಯಂತರರು (ಬೆಸ್ಕಾಂ) ರವರು ತಮ್ಮ ಇಲಾಖೆಯ ವತಿಯಿಂದಲೇ ಮರದ ಎಲೆ ಶೇಖರಿಸಿ ವಿಲೇವಾರಿ ಮಾಡುತ್ತಿದ್ದು, ಶೇಖರಿಸಲು ಪಾಲಿಕೆಯ ಖಾಲಿ ಸ್ಥಳ ಗುರುತಿಸಿಕೊಡಲು ಕೋರಲಾಗಿ ವಾರ್ಡ್ ಅಭಿಯಂತರರು ಸುಬ್ರಹ್ಮಣ್ಯ ದೇವಸ್ಥಾನದ ಬಳಿಯ ಖಾಲಿ ಸ್ಥಳ ಸೂಚಿಸಿದರು. ಅದರಂತೆ ಸಂಗ್ರಹಿಸಿ ಒಂದು ವಾರದೊಳಗೆ ವಿಲೇವಾರಿ ಮಾಡುವುದಾಗಿ ಕಿರಿಯ ಅಭಿಯಂತರರು (ಬೆಸ್ಕಾಂ) ರವರು ತಿಳಿಸಿದರು.

ನೋಡಲ್ ಅಧಿಕಾರಿಗಳು ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು..

| | |
|---|---|
| ಸದಸ್ಯ ಕಾರ್ಯದರ್ಶಿಗಳು ವಾರ್ಡ್ DETER ಸಮಿತಿ | ನೋಡಲ್ ಅಧಿಕಾರಿಗಳು ವಾರ್ಡ್ DETER ಸಮಿತಿ |
| ವಾರ್ಡ್ ಸಂಖ್ಯೆ-160 | 10/8/21 ವಾರ್ಡ್ ಸಂಖ್ಯೆ-160 |

**ಪ್ರತಿಯನ್ನು:-**

1. ಮಾನ್ಯ ವಲಯ ಆಯುಕ್ತರು ರಾರಾನಗರ ವಲಯ ರವರ ಮಾಹಿತಿಗಾಗಿ.
2. ಮಾನ್ಯ ಜಂಟಿ ಆಯುಕ್ತರು ರಾರಾನಗರ ವಲಯ ರವರ ಮಾಹಿತಿಗಾಗಿ.
3. ಮುಖ್ಯ ಅಭಿಯಂತರರು ರಾರಾನಗರ ವಲಯರವರ ಮಾಹಿತಿಗಾಗಿ.
4. ಕಾರ್ಯಪಾಲಕ ಅಭಿಯಂತರರು ರಾರಾನಗರ ವಿಭಾಗ ರವರ ಮಾಹಿತಿಗಾಗಿ.
5. ಸಭೆಯಲ್ಲಿ ಹಾಜರಿದ್ದ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
6. ವಾರ್ಡ್ ಸಮಿತಿ ಸದಸ್ಯರುಗಳಿಗೆ.
7. ಕಛೇರಿ ಪ್ರತಿ.